ಅರಣ್ಯ ಇಲಾಖೆಯ ಕೆನರಾ ವೃತ್ತದಲ್ಲಿರುವ ಖಾಲಿ ಹುದ್ದೆಗಳು

477 - ಡಾ ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಅರಣ್ಯ ಇಲಾಖೆಯ ಕೆನರಾ ವೃತ್ತದಲ್ಲಿ ಮಂಜೂರಾತಿಯಾದ ಗಾರ್ಡ್ ಮತ್ತು ಫಾರೆಸ್ಟರ್ ಹುದ್ದೆಗಳ ಸಂಖ್ಯೆ ಎಷ್ಟು ?*

ಆ) *ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?*

ಇ) *ಈ ಹುದ್ದೆಗಳನ್ನು ಹೆಚ್ಚಿಸುವ ಅಗತ್ಯ ಏನಾದರೂ ಇದೆಯೇ ?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಕೆನರಾ ವೃತ್ತದಲ್ಲಿ ಮಂಜೂರಾತಿಯಾದ ಗಾರ್ಡ್ ಮತ್ತು ಫಾರೆಸ್ಟರುಗಳ ಹುದ್ದೆಗಳು ಈ ಕೆಳಗಿನಂತಿವೆ.

1.	ವನಪಾಲಕ	428
2.	ಅರಣ್ಯ ರಕ್ಷಕ	667

ಆ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಈ ಕೆಳಗಿನಂತಿವೆ.

1.	ವನಪಾಲಕ	90
2.	ಅರಣ್ಯ ರಕ್ಷಕ	136

ಇ) ಈ ಹುದ್ದೆಗಳನ್ನು ತುಂಬುವ ಅಗತ್ಯವಿದೆ.

ವಿದೇಶಿ ಬೋಟುಗಳಿಂದ ರಾಜ್ಯದ ಕರಾವಳಿಯಲ್ಲಿ ಮೀನುಗಾರಿಕೆ

479 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ವಿದೇಶಿ ಬೋಟುಗಳು ಕರ್ನಾಟಕ ಕರಾವಳಿಯ ಸಮುದ್ರ ತೀರದಲ್ಲಿ ಮೀನುಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರಿಂದ ಸಮುದ್ರ ಪ್ರದೇಶದಲ್ಲಿ ಮೀನು ಕ್ಷಾಮ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಈ ಬಗ್ಗೆ ಸರ್ಕಾರ ಗಂಭೀರವಾಗಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುವುದೇ ? (ಪೂರ್ಣ ವಿವರ ನೀಡುವುದು).*

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕರಾವಳಿ ರಕ್ಷಣಾ ಪಡೆಯ ವರದಿಯಂತೆ ವಿದೇಶಿ ನೌಕೆಗಳು ಕರ್ನಾಟಕ ಕರಾವಳಿಯ ಸಮುದ್ರ ತೀರದಲ್ಲಿ ರಾಜ್ಯದ ನಿಗದಿತ (24 ನಾಟಿಕಲ್ ಮೈಲಿ ಒಳಗೆ) ಪ್ರದೇಶದಲ್ಲಿ ಮೀನುಗಾರಿಕೆ ಮೀನುಗಾರಿಕೆ ಮಾಡುತ್ತಿರುವುದಿಲ್ಲ.

ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯ ಮೊದಲನೆ ಎರಡು ವಾರಗಳಲ್ಲಿ ಪಶ್ಚಿಮ ಕರಾವಳಿಯ ಉದ್ದಕ್ಕೂ ಪ್ರತಿಕೂಲ ಹವಾಮಾನವಿದ್ದಿತು. ಇದರಿಂದಾಗಿ ಸುಮಾರು 20 ದಿನಗಳ ಕಾಲ ಮೀನುಗಾರಿಕೆಗೆ ತೊಂದರೆಯಾಗಿದೆ ಮತ್ತು ಮೀನು ಹಿಡುವಳಿಯು ಕಡಿಮೆಯಾಗಿದೆ. ಪ್ರತಿಕೂಲ ಹವಾಮಾನದಿಂದ ಮೀನು ಹಿಡುವಳಿಯು ಕಡಿಮೆಯಾಗಿದೆಯೆ ಹೊರತು, ಮೀನು ಸಿಕ್ಕದೆ ಇರುವುದರಿಂದ ಅಲ್ಲ.

ಆ) ಮೀನುಗಾರಿಕೆ ಋತುವಿನ ಅವಧಿ ಇನ್ನೂ 77 ತಿಂಗಳುಗಳಿದ್ದು, ಮುಂದಿನ ದಿನಗಳಲ್ಲಿ ಮೀನು ಹಿಡುವಳಿ ಉತ್ತಮಗೊಳ್ಳುವ ಸಾಧ್ಯತೆ ಇರುತ್ತದೆ. ಕರಾವಳಿ ತೀರದಲ್ಲಿ ಈಗಾಗಲೇ ಸಾಮಾನ್ಯ ಮೀನುಗಾರಿಕೆಯು ಪ್ರಾರಂಭವಾಗಿರುತ್ತದೆ. ಹಣಕಾಸು ಸಂಸ್ಥೆಗಳಿಗೆ ಸಾಲ ಮತ್ತು ಬಡ್ಡಿ ಮರುಪಾವತಿಸಬೇಕಿರುವ ಮೀನುಗಾರರಿಗೆ ಕಾಲಾವಧಿಯನ್ನು ವಿಸ್ತರಿಸಿ ಸಹಾಯ ನೀಡಲು ಕೋರಲಾಗಿದೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದಾಗಿ ಮೃತಪಟ್ಟವರಿಗೆ ಪರಿಹಾರ

480 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ವಿರಾಜಪೇಟೆ ತಾಲ್ಲೂಕಿನಲ್ಲಿ ಅನೇಕರು ಕಾಡಾನೆಗಳ ಹಾವಳಿಯಿಂದಾಗಿ ಪ್ರಾಣ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಹಾಗಿದ್ದಲ್ಲಿ ಕಾಡಾನೆಗಳ ಹಾವಳಿಯಿಂದ ಮೃತರಾದವರ ಕುಟುಂಬಕ್ಕೆ ಸರ್ಕಾರದ ಇಲಾಖೆ ನೀಡುವ ಪರಿಹಾರವೆಷ್ಟು ? ಪರಿಹಾರ ನಿಗಧಿಗೊಳಿಸುವ ಸರ್ಕಾರದವರು ಅನುಸರಿಸುತ್ತಿರುವ ಮಾನದಂಡವೇನು ?*

ಇ) *ಪ್ರಸಕ್ತ ಸಾಲಿನಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಪರಿಹಾರದ ರೂಪದಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಹೌದು.

ಆ) ವನ್ಯಪ್ರಾಣಿಗಳಿಂದ ಮೃತಪಟ್ಟಿರುವ ಕಾನೂನು ಬದ್ಧ ವಾರಸುದಾರರಿಗೆ ಗರಿಷ್ಟ ರೂ. 25,000.00ಗಳ ಎಕ್ಸ್ ಗ್ರೇಷಿಯಾ ಮಂಜೂರು ಮಾಡಲಾಗುತ್ತಿತ್ತು. ಎಕ್ಸ್ ಗ್ರೇಷಿಯಾವನ್ನು ಹೆಚ್ಚಿಸಲು ಸಾರ್ವಜನಿಕರಿಂದ ಬಹಳಷ್ಟು ಮನವಿಗಳು ಬಂದಿವೆ. ಹಾಗೂ ವಿಷಯದ ವಿಧಾನಮಂಡಲದಲ್ಲಿ